ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಮಂಡ್ಯ – 571 401
**MANDYA INSTITUTE OF MEDICAL SCIENCES**
MANDYA -571 401
(Autonomous Medical Institution, Government of Karnataka)

Phone & Fax : 08232-231001
Director : 08232-222086
CAO : 08232-231197
FA : 08232-401198
E.Mail Address:
mimsmandya@gmail.com

ಸಂಖ್ಯೆ: ಮಿಮ್/ಬೋ.ಆ/ಸರಬ.ಟೆಂಡರ್/ಆರ್‌ಡಿ/53/2012–13

ದಿನಾಂಕ: 30.08.2013 ರಂದು ಪೂರ್ವಾಹ್ನ 11.00 ಗಂಟೆಗೆ ಮಾನ್ಯ ನಿರ್ದೇಶಕರು, ಮಿಮ್ಸ್, ಮಂಡ್ಯ, ರವರ ಕೊಠಡಿಯಲ್ಲಿ ಮಾನ್ಯ ಸರ್ಕಾರದ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಖರೀದಿ ಸಮಿತಿ ಸಭೆಯ ನಡವಳಿಗಳು:-

*ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರುಗಳು:*

| | | |
|---|---|---|
| 1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>(ವೈದ್ಯಕೀಯ ಶಿಕ್ಷಣ)<br>ವಿಧಾನ ಸೌಧ, ಬೆಂಗಳೂರು. | – | ಅಧ್ಯಕ್ಷರು |
| 2. ನಿರ್ದೇಶಕರು<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಮಂಡ್ಯ. | – | ಉಪಾಧ್ಯಕ್ಷರು |
| 3. ಮುಖ್ಯ ಆಡಳಿತಾಧಿಕಾರಿಗಳು<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಮಂಡ್ಯ. | – | ಸದಸ್ಯರು |
| 4. ವೈದ್ಯಕೀಯ ಅಧೀಕ್ಷಕರು<br>ಮಿಮ್ಸ್ ಬೋಧಕ ಆಸ್ಪತ್ರೆ,<br>ಮಂಡ್ಯ | – | ಸದಸ್ಯರು |
| 5. ಆರ್ಥಿಕ ಅಧಿಕಾರಿಗಳು ಕಂ ಮುಖ್ಯ ಲೆಕ್ಕಾಧಿಕಾರಿಗಳು<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಮಂಡ್ಯ. | – | ಸದಸ್ಯ ಕಾರ್ಯದರ್ಶಿಗಳು |

ಮಾನ್ಯ ನಿರ್ದೇಶಕರು, ಮಿಮ್ಸ್ ಖರೀದಿ ಸಮಿತಿ ಉಪಾಧ್ಯಕ್ಷರು ರವರು ಮಿಮ್ಸ್ ಖರೀದಿ ಸಮಿತಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

ಖರೀದಿ ಸಮಿತಿ ಸಭೆಗೆ ಮಂಡಿಸಲಾದ ಟಿಪ್ಪಣಿಯನ್ನು ಸಮಿತಿಯು ಪರಿಶೀಲಿಸಿತು.

<u>ವಿಷಯ: ರೇಡಿಯಾಲಜಿ ವಿಭಾಗಕ್ಕೆ ಕ್ಷ–ಕಿರಣ ಫಿಲಂ (ಸಿ.ಆರ್. ಸಿಸ್ಟಮ್ ಯಂತ್ರಕ್ಕೆ) ಖರೀದಿಸುವ ಬಗ್ಗೆ:-</u>

ಮೇಲ್ಕಂಡ ಕ್ಷ–ಕಿರಣ ಫಿಲಂ ಖರೀದಿಗೆ ಸಂಬಂಧಿಸಿದಂತೆ, ಸಂಸ್ಥೆಯ ಕಡತವನ್ನು ಪರಿಶೀಲಿಸಲಾಯಿತು. ಆನ್‌ಲೈನ್ ಮೂಲಕ ಅಲ್ಪಾವಧಿ ಇ–ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ, ದಿನಾಂಕ: 23.05.2013 ರಂತೆ ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಮತ್ತು ವಾರ್ತಾ ಇಲಾಖೆಯ ಮೂಲಕ ಪತ್ರಿಕಾ ಪ್ರಕಟಣೆ ನೀಡಿರುವ ವಿವರಣೆಗಳು ಲಭ್ಯವಿದ್ದು, ದಿನಾಂಕ: 25.06.2013 ರಂದು ನಡೆದ ಸಂಸ್ಥೆಯ ಟೆಂಡರ್ ಪರಿಶೀಲನಾ ಸಮಿತಿಯು ಈ ಟೆಂಡರ್‌ನಲ್ಲಿ ಒಬ್ಬರೇ ಟೆಂಡರದಾರರು ಭಾಗವಹಿಸಿರುವುದರಿಂದ ಸದರಿ ಟೆಂಡರ್‌ನ್ನು ತಿರಸ್ಕರಿಸಿ, ಮರು ಟೆಂಡರ್‌ನ್ನು ಆಹ್ವಾನಿಸಲು ಸಮಿತಿಯು ನಿರ್ಧರಿಸಿತು.

ತದ ನಂತರ ಸಂಸ್ಥೆಯು ಅನ್‌ಲೈನ್ ಮೂಲಕ ಅಲ್ಪಾವಧಿ ಮರು ಇ-ಟೆಂಡರ್‌ನ್ನು ಮೇಲ್ಕಂಡ ಕ್ಷ-ಕಿರಣ ಫಿಲಂ ಖರೀದಿಗೆ ಸಂಬಂಧಿಸಿದಂತೆ, ದಿನಾಂಕ: 11.07.2013 ರ ಜಿಲ್ಲಾ ಟೆಂಡರ್ ಬುಲೆಟಿನ್ ಮತ್ತು ವಾರ್ತಾ ಇಲಾಖೆಯ ಮೂಲಕ ಪತ್ರಿಕೆ ಪ್ರಕಟಣೆ ನೀಡಲಾಗಿತ್ತು. ವಿವರಗಳು ಕಡತದಲ್ಲಿ ಲಭ್ಯವಿದೆ.

ಅದರಂತೆ ನಿಗದಿತ ಅವಧಿಯೊಳಗಾಗಿ ಈ ಟೆಂಡರ್‌ನಲ್ಲಿ ಎರಡು ಸಂಸ್ಥೆಯ ಟೆಂಡರ್‌ದಾರರು ಅನ್‌ಲೈನ್ ಮೂಲಕ ಭಾಗವಹಿಸಿದ್ದು, ಈ ಟೆಂಡರ್‌ಗಾಗಿ M/s Foress Healthcare LLP, No. 746, 1st floor, 15th main road, B.S.K. 2nd stage, Bangalore, ರವರು ಮತ್ತು Halepalya Lakshmiah Somashekar (SR India Business Centre) ರವರು ಟೆಂಡರ್‌ದಾರರಾಗಿ ಭಾಗವಹಿಸಿರುವುದನ್ನು ಗಮನಿಸಲಾಯಿತು. ಎರಡು ಸಂಸ್ಥೆಯ ಟೆಂಡರ್‌ಗಳಲ್ಲಿ ಅನ್‌ಲೈನ್ ಮೂಲಕವೆ ಕ್ರ.ಸಂ. 1 ರ ಟೆಂಡರ್‌ದಾರರ ಟೆಂಡರ್ ಅರ್ಜಿಯನ್ನು ಪುರಸ್ಕರಿಸಿ, ಕ್ರ.ಸಂ. 2 ರ ಟೆಂಡರ್‌ದಾರರ ಟೆಂಡರ್ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಈ ಟೆಂಡರ್‌ಗಾಗಿ M/s Foress Health Care LLP, # 22/29, 16th Cross Road, Bendrenagar, Kadrenahalli Cross, Padmanabhanagar, Bangalore, ಇವರ ಟೆಂಡರ್ ಅನ್‌ಲೈನ್‌ನಲ್ಲಿ ಪುರಸ್ಕರಿಸಿರುವುದನ್ನು ಸಮಿತಿಯು ಗಮನಿಸಲಾಯಿತು.

ಈ ಸಂಬಂಧದಲ್ಲಿ ಟೆಂಡರ್ ಪರಿಶೀಲನಾ ಸಮಿತಿಯು M/s Foress Healthcare LLP, No. 746, 1st floor, 15th main road, B.S.K. 2nd stage, Bangalore, ಟೆಂಡರ್‌ದಾರರ ತಾಂತ್ರಿಕ ಬಿಡ್‌ಅನ್ನು ಅನ್‌ಲೈನ್ ಮೂಲಕ ದಿನಾಂಕ: 07.08.2013 ರಂದು ತೆರೆದು, ತಾಂತ್ರಿಕ ಬಿಡ್ ದಾಖಲೆಗಳನ್ನು ಪರಿಶೀಲಿಸಲಾಯಿತು. ಅದರಂತೆ ಸದರಿ ಸಂಸ್ಥೆಯವರು ಅನುಭವ ಪ್ರಮಾಣ ಪತ್ರದ ಬದಲು ಸರಬರಾಜು ಆದೇಶ ಪತ್ರವನ್ನು ನೀಡಿರುತ್ತಾರೆ ಹಾಗೂ ಸದರಿ ಫಿಲಂಗಳನ್ನು ಸರಬರಾಜು ಮಾಡಲು ಅಧಿಕೃತ ಮಾರಾಟಗಾರೆಂದು ದೃಢೀಕರಣ ಪತ್ರವನ್ನು ಟೆಂಡರ್ ದಾಖಲೆಗಳ ಜೊತೆ ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಸಮಿತಿ ಉಪಾಧ್ಯಕರು ಅಧ್ಯಕ್ಷರ ಜೊತೆ ಚರ್ಚಿಸಿದರು. ಸದರಿ ಸಂಸ್ಥೆಯವರು ಅಧಿಕೃತ ಮಾರಾಟಗಾರರಾಗಿರುವುದರಿಂದ ಆರ್ಥಿಕ ಬಿಡ್‌ಅನ್ನು ತೆರೆದು, ಇತರೇ ಸಂಸ್ಥೆಗಳಿಗೆ ಸರಬರಾಜು ಮಾಡಿರುವ ದರಗಳಿಗೆ ಹೋಲಿಕೆ ಮಾಡಿ ಖರೀದಿಸುವಂತೆ ಸಮಿತಿ ಅಧ್ಯಕ್ಷರು ಸಭೆಗೆ ತಿಳಿಸಿದರು. ಸಮಿತಿ ಸದಸ್ಯರು ಖರೀದಿಸಲು ಒಮ್ಮತ ಅಭಿಪ್ರಾಯ ವ್ಯಕ್ತಪಡಿಸಿದರು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಆರ್ಥಿಕ ಅಧಿಕಾರಿಗಳು ಕಂ ಮುಖ್ಯ ಲೆಕ್ಕಾಧಿಕಾರಿಗಳು
ಸಮಿತಿ ಸದಸ್ಯ ಕಾರ್ಯದರ್ಶಿಗಳು
ಮಿಮ್ಸ್, ಮಂಡ್ಯ

ನಿರ್ದೇಶಕರು,
ಸಮಿತಿ ಉಪಾಧ್ಯಕ್ಷರು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.

ಕಾರ್ಯದರ್ಶಿಗಳು,
ಸಮಿತಿ ಅಧ್ಯಕ್ಷರು
ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ)
ವಿಧಾನ ಸೌಧ, ಬೆಂಗಳೂರು